MARCH 09, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ವಿಧಾನಮಂಡಲದ ಉಭಯ ಸದನಗಳಲ್ಲಿ,** ಇಂದಿನಿಂದ 2026–27 ಬಜೆಟ್ ಮೇಲಿನ ಚರ್ಚೆಗಳು ಆರಂಭಗೊಂಡಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರಸಕ್ತ ಸಾಲಿನ ಆಯವ್ಯಯವನ್ನು ಕಳೆದ ಶುಕ್ರವಾರ ಮಂಡಿಸಿದ್ದು, ತಮ್ಮ ದಾಖಲೆಯ 17 ನೇ ಬಜೆಟ್, ಸಮತೋಲನದಿಂದ ಕೂಡಿದ್ದು, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಪೂರಕವಾಗಿದೆ ಎಂದಿದ್ದಾರೆ. ವಿಧಾನ ಪರಿಷತ್ ಕಲಾಪ ಆರಂಭಕ್ಕೂ ಮುನ್ನ, ಇತ್ತೀಚೆಗೆ ಅಗಲಿದ, ಹಿರಿಯ ಪತ್ರಕರ್ತ, ಮಾಜಿ ಪರಿಷತ್ತ ಸದಸ್ಯ, ಪಿ. ರಾಮಯ್ಯ ಹಾಗೂ ಬೈಂದೂರು ಕ್ಷೇತ್ರದ ಮಾಜಿ ಶಾಸಕ ಅಪ್ಪಣ್ಣ ಹೆಗ್ಡೆ ಅವರಿಗೆ ಸಂತಾಪ ಸೂಚಿಸಲಾಯಿತು. ಈ ತಿಂಗಳ 27 ರ ವರೆಗೆ, ರಜಾ ದಿನಗಳನ್ನು ಹೊರತುಪಡಿಸಿ, ಉಭಯ ಸದನಗಳ ಕಲಾಪಗಳು ಮುಂದುವರಿಯಲಿವೆ.

<><><>

**ಕೇಂದ್ರ ಸರ್ಕಾರ, "ಸಬ್ ಕಾ ಸಾತ್**; ಸಬ್ ಕಾ ವಿಕಾಸ್; ಜನರ ಆಕಾಂಕ್ಷೆಗಳ ಈಡೇರಿಕೆ" ಎಂಬ ಶೀರ್ಷಿಕೆಯಡಿ, ಬಜೆಟ್ ನಂತರದ, ಮಹತ್ವದ ವೆಬಿನಾರ್ ಆಯೋಜಿಸಿದೆ. ವರ್ಚುವಲ್ ವೇದಿಕೆಯ ಮೂಲಕ ವೆಬಿನಾರ್ ಉದ್ದೇಶಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾತನಾಡಿದರು. ಜನರ ಆಕಾಂಕ್ಷೆಗಳನ್ನು ಪೂರೈಸುವುದು ಸರ್ಕಾರದ ಧ್ಯೇಯವಾಗಿದೆ, ಇದರ ಸಾಕ್ಷಾತ್ಕಾರಕ್ಕಾಗಿ ಶಿಕ್ಷಣ, ಕೌಶಲ, ಪ್ರವಾಸೋದ್ಯಮ, ಆರೋಗ್ಯ, ಕ್ರೀಡೆ, ಸಂಸ್ಕೃತಿ ಮೊದಲಾದ ಕ್ಷೇತ್ರಗಳ ಮಹತ್ವಪೂರ್ಣ ವಿಚಾರಗಳ ಬಗ್ಗೆ ವೆಬಿನಾರ್ ಮೂಲಕ ಚರ್ಚೆಗಳು ನಡೆಯಲಿವೆ. ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ದೃಷ್ಟಿಯಿಂದ ವೆಬಿನಾರ್ ಮಹತ್ವಪೂರ್ಣವಾಗಿದೆ ಎಂದರು. ಮುಂದಿನ ದಿನಗಳಲ್ಲಿ ಕೇರ್ ಎಕಾನಮಿ ಹೆಚ್ಚಿನ ಮಹತ್ವ ಪಡೆಯಲಿದೆ. ಈ ನಿಟ್ಟಿನಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಅಗತ್ಯವಾದ ಕೌಶಲವನ್ನು ಹೆಚ್ಚಿಸುವತ್ತ ಗಮನ ಹರಿಸುವ ಅಗತ್ಯವಿದೆ ಎಂದರು. ಇಂದು ಸಂಜೆ 5 ಗಂಟೆ 45 ನಿಮಿಷದ ವರೆಗೆ, ವೆಬಿನಾರ್ ನಡೆಯಲಿದೆ.

<><><>

**ಸ್ಥಳೀಯ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ,** ಪ್ರೋತ್ಸಾಹಿಸಲು ಹಾಗೂ ರಾಷ್ಟ್ರ ಮಟ್ಟದಲ್ಲಿ ಅವಕಾಶ ಒದಗಿಸಲು, ಸಂಸದರ ಕ್ರೀಡಾ ಉತ್ಸವ ಆಯೋಜಿಸಲಾಗಿದೆ ಎಂದು, ಹಾವೇರಿ–ಗದಗ ಲೋಕಸಭಾ ಕ್ಷೇತ್ರದ ಸಂಸದ, ಬಸವರಾಜ ಬೊಮ್ಮಾಯಿ, ತಿಳಿಸಿದ್ದಾರೆ. ಹಾವೇರಿ ಜಿಲ್ಲೆ, ಹಿರೇಕೆರೂರು ತಾಲೂಕು, ರಟ್ಟೀಹಳ್ಳಿಯಲ್ಲಿ, ಸಂಸದರ ಕ್ರೀಡಾ ಉತ್ಸವಕ್ಕೆ ಚಾಲನೆ ನೀಡಿ, ಮಾತನಾಡಿದರು. ಪ್ರಧಾನಮಂತ್ರಿಯವರ ಮಹತ್ವಾಕಾಂಕ್ಷೆಯ, ಫಿಟ್ ಇಂಡಿಯಾ, ಖೇಲೋ ಇಂಡಿಯಾ ಹಾಗೂ ಜೀತೋ ಇಂಡಿಯಾ ಉಪಕ್ರಮದಡಿ, ಕ್ರೀಡಾ ಮನೋಭಾವದ, ಆರೋಗ್ಯವಂತ, ಸುದೃಢ ಯುವ ಸಮಾಜವನ್ನು, ಕ್ರೀಡೆಗಳ ಮೂಲಕ ರೂಪಿಸಲು, ಉದ್ದೇಶಿಸಲಾಗಿದೆ ಎಂದರು.

<><><>

**‘ಕ್ವಾಂಟಮ್ ರೋಡ್‌ಮ್ಯಾಪ್’ನ ಅನುಷ್ಠಾನಕ್ಕೆ,** 10 ಕೋಟಿ ರೂಪಾಯಿ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ, ಮುಖ್ಯಮಂತ್ರಿಯವರು ಘೋಷಿಸಿರುವುದು, ಕರ್ನಾಟಕವನ್ನು ಕ್ವಾಂಟಮ್ ಕ್ಷೇತ್ರದ, ಕೇಂದ್ರವನ್ನಾಗಿಸುವ, ಪ್ರಮುಖ ಹೆಜ್ಜೆಯಾಗಿದೆ ಎಂದು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ, ಎನ್.ಎಸ್.ಬೋಸರಾಜು, ಹೇಳಿದ್ದಾರೆ. ಬೆಂಗಳೂರಿನ ಹೆಸರಘಟ್ಟದಲ್ಲಿ, ಕ್ವಾಂಟಮ್ ಸಿಟಿ ನಿರ್ಮಿಸಲು, ಸ್ಥಳ ಗುರುತಿಸಿ, ಅಭಿವೃದ್ಧಿ ಪಡಿಸಲಾಗುತ್ತಿದೆ. 233 ಕೋಟಿ ರೂಪಾಯಿ ವೆಚ್ಚದಲ್ಲಿ, ಬೆಂಗಳೂರಿನ ಆದಿನಾರಾಯಣ ಹೊಸಹಳ್ಳಿಯಲ್ಲಿ, ‘ವಿಜ್ಞಾನ ನಗರ’ ಸ್ಥಾಪನೆಗೆ, ಕೇಂದ್ರಕ್ಕೆ ವಿಸ್ತೃತ ಯೋಜನಾ ವರದಿ ಸಲ್ಲಿಸಲಾಗಿದೆ..

<><><>

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ,** ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘ, ಗೌರಮ್ಮ ಚೆನ್ನಪ್ಪ ಹಲಗತ್ತಿ ದತ್ತಿ ಅಂಗವಾಗಿ, ಸುನಿತಾ ಮಾದರ ಅವರಿಗೆ, ಶ್ರಮಿಕ ಮಹಿಳೆ ಪ್ರಶಸ್ತಿ ನೀಡಿ, ಗೌರವಿಸಿದೆ. ನಗರದ, ಕರ್ನಾಟಕ ವಿದ್ಯಾವರ್ಧಕ ಸಂಘದ, ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಉಪ ಆಯುಕ್ತರಾದ, ಅನುರಾಧಾ ವಸ್ತ್ರದ, ಪ್ರಶಸ್ತಿ ಪ್ರದಾನ ಮಾಡಿದರು. ಶ್ರಮಿಕ ಮಹಿಳೆ ಪ್ರಶಸ್ತಿಗೆ ಭಾಜನರಾದ ಸುನಿತಾ ಮಾದರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಸುನಿತಾ ಮಾದರ 21 ಸೆಕೆಂದುಗಳು**

<><><>

**ಹಿಂದೂಸ್ಥಾನಿ ಗಾಯಕ,** ಧಾರವಾಡದ ಮೃತ್ಯುಂಜಯ ಶೆಟ್ಟರ, ಬಾಗಲಕೋಟೆಯ ರವೀಂದ್ರ ಸೊರಗಾವಿ, ಹಾರ್ಮೋನಿಯಂ ಕಲಾವಿದ, ಗದಗನ ಪಂಚಾಕ್ಷರಿ ಅಣ್ಣಿಗೇರಿ, ತಬಲ ವಾದಕ, ಬೀದರಿನ ವಿಠಲ ಪೂಜಾರಿ, ರಾಜ್ಯ ಸಂಗೀತ, ನೃತ್ಯ ಅಕಾದೆಮಿಯ, 2025–26ನೇ ಸಾಲಿನ, ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಕಾದೆಮಿ ಅಧ್ಯಕ್ಷೆ, ಶುಭಾ ಧನಂಜಯ, ಬೆಂಗಳೂರಿನಲ್ಲಿ, ಮಾಹಿತಿ ನೀಡಿ, ಕೊಪ್ಪಳ ಜಿಲ್ಲೆ, ಗಂಗಾವತಿಯ, ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯ, ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದೆ ಎಂದರು.

<><><>

**ಉತ್ತರ ಕನ್ನಡ ಜಿಲ್ಲೆಯ,** ಮಲೆನಾಡು ಮತ್ತು ಕರಾವಳಿ ಭಾಗವನ್ನು ಬೆಸೆಯುವ ಪ್ರಮುಖ ರಸ್ತೆಯಾದ, ಹೊಸಹಳ್ಳಿ–ಯಲ್ಲಾಪುರ ಹಾಗೂ ಮಾಸ್ತಿಕಟ್ಟೆಯಿಂದ ಬಾಳೆಗುಳಿ ವರೆಗಿನ ರಸ್ತೆ ಸುಧಾರಣೆಗೆ, ಕೇಂದ್ರ ಸರ್ಕಾರ 101 ಕೋಟಿ 21 ಲಕ್ಷ ರೂಪಾಯಿ ಬೃಹತ್ ಅನುದಾನವನ್ನು ಬಿಡುಗಡೆ ಮಾಡಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>